## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ

**ಸಿ ಸಿ ಸಂಖ್ಯೆ 818/2022**

ಚಾಸಾ 2 ಫ್ರಾಸಾ 5

ಸಾಕ್ಷಿಯ ಹೆಸರು : ಉಮೇಶ್

ತಂದೆಯ ಹೆಸರು : ನಿಂಗಣ್ಣ

ವಯಸ್ಸು : 35 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಸಿದ್ದಯ್ಯನಪುರ

ದಿನಾಂಕ 28.11 .2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ 1 ಮತ್ತು ಚಾಸಾ 3 ನನಗೆ ಗೊತ್ತು. ಸಾಕ್ಷಿಯು ನಿಪಿ-1ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಇ) ಎಂದು ಗುರುತಿಸಲಾಯಿತು. ಈಗ್ಗೆ 2-3 ವರ್ಷಗಳ ಹಿಂದೆ ಜಾಗೇರಿ ಗ್ರಾಮದಲ್ಲಿ ಪೊಲೀಸರ ಮನವಿಯ ಮೇರೆಗೆ ಸಹಿ ಮಾಡಿದ್ದೆ. ಆ ದಿನ ನನ್ನ ಜೊತೆ ಚಾಸಾ 3ರವರೂ ಸಹಾ ಇದ್ದರು. ನಿಪಿ-1 ರಲ್ಲಿರುವ ಸಂಗತಿ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಇರುವ ಮುದ್ದೇಮಾಲು 1 ರಿಂದ 8 ನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿಯು 4 ಫೋಟೋಗಳಲ್ಲಿ ತಮ್ಮನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-7 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಕರೆದಕೊಂಡು ಹೋಗಿ ಫೋಟೋಗಳನ್ನು ತೆಗೆದಿರುತ್ತಾರೆ. ಅದರೆ ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುವುದಿಲ್ಲ.

ನ್ಯಾಯಾಲಯದ ಮುಂದೆ ಆರೋಪಿ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮನವಿ ಮಾಡಿದ್ದು ಸದರಿ ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 06.09.2021 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 3ರವರು ಕೋರ್ಟ್ ಸರ್ಕಲ್ ಬಳಿ ಟೀ ಕುಡಿಯುತ್ತಿದ್ದಾಗ ಚಾಸಾ6ರವರು ಬಂದು ಚಾಸಾ 1ರವರು ಕರೆಯುತ್ತಿರುವುದಾಗಿ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಚಾಸಾ 1ರವರು ತಮ್ಮ ಕಛೇರಿಯಲ್ಲಿ, ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿ ಕಾಲದಲ್ಲಿ ಇರಬೇಕೆಂದು ನೋಟೀಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ದಿನ ನಾವು 9.45 ಗಂಟೆಗೆ ಚಾಸಾ 1ರವರ ಕಛೇರಿ ಬಿಟ್ಟು ನಾವು

ಶಿಲುವೈಪುರ ರಸ್ತೆಯಲ್ಲಿ ಜಪಮಾಲೆ ಮಾತಾ ಗುಡ್ಡದ ಪಕ್ಕದಲ್ಲಿರುವ ತಂಬಿಯವರ ಜಮೀನಿಗೆ ಸುಮಾರು 10.15 ಗಂಟೆ ಸಮಯಕ್ಕೆ ಹೋಗಿದ್ದೆವು ಎಂದರೆ ಸಾಕ್ಷಿಯು ಸಮಯ ಗೊತ್ತಿಲ್ಲ ಆದರೆ ಹೋಗಿದ್ದೆವು ಎಂದು ನುಡಿಯುತ್ತಾರೆ. ಅದೇ ದಿನ ರಾತ್ರಿ 10.30 ಗಂಟೆ ಸಮಯದಲ್ಲಿ ಒಬ್ಬ ವ್ಯಕ್ತಿ ಪಾಸ್ಕಲ್ ನಗರ ಶಿಲುವೈಪುರ ಮುಖ್ಯ ರಸ್ತೆ ಕಡೆಯಿಂದ ಜಪಮಾಲಾ ಮಾತಾ ಗುಡ್ಡದ ಅರಣ್ಯದ ಕಡೆಗೆ ತಲೆಗೆ ನೆತ್ತಿ ಬ್ಯಾಟರಿ ಕಟ್ಟಿಕೊಂಡು ಬಂದೂಕು ಹಿಡಿದುಕೊಂಡು ಕೈನಲ್ಲಿ ಬ್ಯಾಗ್ ಹಿಡಿದುಕೊಂಡು ಹೋಗುತ್ತಿದ್ದುನ್ನು ಕಂಡು ಆತನನ್ನು ಸುತ್ತುವರೆದು ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಆತನನ್ನು ಹಿಡಿದು ವಿಚಾರಣೆ ಮಾಡಲಾಗಿ ಆತ ತನ್ನ ಹೆಸರನ್ನು ಗೋವಿಂದರಾಜು, 42 ವರ್ಷ , ಹಳೇಕೋಟೆ, ಸತ್ತೇಗಾಲ ಜಾಗೇರಿ ಎಂಬುದಾಗಿ ತಿಳಿಸಿದ್ದು ನಾಡ ಬಂದೂಕು ಹೊಂದಿದ್ದ ಬಗ್ಗೆ ಪರವಾನಿಗೆ ಇಲ್ಲ ಎಂಬುದಾಗಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಹಾಗೂ ತಾನು ಬೇಟೆಯಾಡಲು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಸಮಕ್ಷಮ ಇರುವ ಮುದ್ದೇಮಾಲು 1 ರಿಂದ 8 ನ್ನು ಆರೋಪಿಯಿಂದ ಅಮಾನತ್ತು ಪಡಿಸಿಕೊಂಡು ಎಂ ಎಂಬ ಅಕ್ಷರದಿಂದ ಸೀಲು ಮಾಡಲಾಯಿತು ಎಂದರೆ ಸರಿಯಲ್ಲ.

ಸದರಿ ಮಾಲುಗಳನ್ನು ಅಮಾನತ್ತು ಪಡಿಸಿಕೊಳ್ಳಮ ಕಾಲದಲ್ಲಿ ನಾನು ಹಾಗೂ ಚಾಸಾ 3ರವರು ಇದ್ದು ನಿಪಿ–1 ದಾಖಲೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ–4 ರಿಂದ ನಿಪಿ–7 ಫೋಟೋಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಇರುವುದಿಲ್ಲ ಎಂದು ನುಡಿಯುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

( ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ.